INDIAN JOURNAL OF HISTORY AND ARCHAEOLOGY
ISSN (e):2582-225X
Vol-4, Issue -4, November-December, 2022,
Page No,01 - 08
Peer Reviewed Journal, Referred Journal

# ಮೊಘಲ್ ವಾಸ್ತುಶಿಲ್ಪದಲ್ಲಿ ಪಿಯಾತ್ರದುರ ಕಲೆ

ಉಮ್ಮೆಖುರ್ಷಿದ್.ದೊಡ್ಡಮನಿ.[1]

ಹದಿನೇಳನೆ ಶತಮಾನದಲ್ಲಿ ಭಾರತೀಯ ವಾಸ್ತುಶಿಲ್ಪವನ್ನು ವೈಭವಿಕರಿಸಿ ಉತ್ತುಂಗಕ್ಕೇರಿಸಿದ ಶ್ರೇಯಸ್ಸು ಮೊಘಲರಿಗೆ ಸಲ್ಲುತ್ತದೆ. ಇವರ ಕಾಲದ ವಾಸ್ತುಶೈಲಿ ವಿವಿಧ ಸಂಸ್ಕೃತಿಗಳ ಸಂಶ್ಲೇಷಣೆಯಿಂದ ಕೂಡಿದೆ.ಇವುಗಳಲ್ಲಿ ಮನಸೆಳೆಯುವ ಗಮನಾರ್ಹ ಹಾಗೂ ಪ್ರಭಾವಶಾಲಿ ಗುಣಲಕ್ಷಣಗಳುಳ್ಳ ಪಿಯಾತ್ರದುರ ಕಲೆಯೂ ಒಂದು. ಇದೊಂದು ಅಲಂಕಾರಿಕ ತಂತ್ರಜ್ಞಾನವಾಗಿದ್ದು ಶಿಲೆಯ ಕೆತ್ತನೆಯ ಕೆಲಸವಾಗಿದೆ. 16ನೇ ಶತಮಾನದ ಕೊನೆಯಲ್ಲಿ ಫ್ಲೋರೆಂಟೈನ್ ಜನರು ಈ ಕಲೆಯನ್ನು ವಿನ್ಯಾಸಗೊಳಿಸಿದರು ಪಿಯಾತ್ರದುರ ಕಲೆಯ ಪ್ರಕಾರದಲ್ಲಿ ಅಮೃತಶಿಲೆಯ ಫಲಕಗಳ ಮೇಲೆ ವರ್ಣರಂಜಿತ ಶಿಲೆಗಳ ತುಣುಕಗಳನ್ನು ಒಳಸೇರಿಸುವಿಕೆಯಿಂದ ಅಥವಾ ತುಂಬುವ ಮೂಲಕ ಅಲಂಕಾರ ಮಾಡಲಾಗುತ್ತದೆ. ಭಾರತದಲ್ಲಿ ಮೊಘಲ್ ಅರಸ ಜಹಾಂಗೀರ್‌ನ ಆಳ್ವಿಕೆಯಲ್ಲಿ ಪಿಯಾತ್ರದುರ ಕಲೆಯು ನೂರ್‌ಜಹಾನ್‌ಳು ನಿರ್ಮಿಸಿದ, ತನ್ನ ತಂದೆ ಇತ್ಮದ್–ಉದ್–ದೌಲನ ಗೋರಿ ಕಟ್ಟಡದಲ್ಲಿ ಮೊದಲ ಬಾರಿಗೆ ಬಳಸಲ್ಪಟ್ಟಿತು. ಮೊಘಲರ ಆಳ್ವಿಕೆಯಲ್ಲಿ ಪರ್ಷಿಯನ್ ಭಾಷೆಯಲ್ಲಿ ಪಾಚಿಖಾರಿ ಅಥವಾ ಪ್ರಾಚಿಖಾರಿ ಎಂದು ಕರೆಯಲ್ಪಡುತ್ತಿದ್ದ ಪಿಯಾತ್ರದುರ ಕಲೆಯು ಷಾಜಹಾನ್‌ನ ಆಳ್ವಿಕೆಯಲ್ಲಿ ಮತ್ತಷ್ಟು ವಿಕಾಸ ಹೊಂದಿತು. ಷಾಜಹಾನ್‌ನ ವಿಶಿಷ್ಟ ಅಭಿರುಚಿಯು ಕಟ್ಟಡಗಳ ಅಲಂಕರಣದ ಪಿಯಾತ್ರದುರ ಕಲೆಯ ಅದ್ದೂರಿತನಕ್ಕೆ ಸ್ಥಳವನ್ನು ಒದಗಿಸಿತು. ಈತನ ಆಡಳಿತದ ಅವಧಿಯಲ್ಲಿ ಪಿಯಾತ್ರದುರ ಕಲೆಯು ಭಾರತೀಯ ಉಪಖಂಡದಲ್ಲಿ ಪ್ರವರ್ಧಮಾನಕ್ಕೆ ಬಂದಿತು. ಮೊಘಲರ ಗಮನಾರ್ಹ ಕಟ್ಟಡಗಳಾದ ಜಹಾಂಗೀರ್‌ನ ಗೋರಿ, ತಾಜ್‌ಮಹಲ್, ಲಾಹೋರ್ ಕೋಟೆಯ ಶೀಶ್‌ಮಹಲ್ ಮತ್ತು ನೌಲಖಾ ಮಂಟಪ, ದೆಹಲಿಯ ಕೆಂಪು ಕೋಟೆಯ ರಂಗ್‌ಮಹಲ್ ಮತ್ತು ಖಾಸ್‌ಮಹಲ್, ಹಾಗೂ ಆಗ್ರಾ ಕೋಟೆಯ ದಿವಾನ್ ಎ–ಖಾಸ್‌ಗಳಲ್ಲಿ ಪಿಯಾತ್ರದುರ ಕಲೆಯು ಸೂಕ್ಷ್ಮವಾಗಿ ಮತ್ತು ಸಂಕೀರ್ಣವಾಗಿ ಬಳಸಲ್ಪಟ್ಟಿದೆ. ಸಾಮಾನ್ಯವಾಗಿ ಪಿಯಾತ್ರದುರ ಎಂಬುದು ವರ್ಣರಂಜಿತ ಶಿಲೆಗಳ ಕತ್ತರಿಸಿದ ವಿನ್ಯಾಸಗಳನ್ನು ಮತ್ತೊಂದು ಶಿಲೆಯ ಮೇಲ್ಮೈಯಲ್ಲಿ ಅಂಟಿನ ಲೇಪನದ ಮೂಲಕ ಹುದುಗಿಸಿ ಅಳವಡಿಸುವ ಕಲೆಯಾಗಿದೆ ಮೊಘಲರ ಕಾಲದಲ್ಲಿ ಈ ಕಲೆಯು ಪರ್ಷಿಯನ್ ಭಾಷೆಯಲ್ಲಿ ಪಾಚಿಕಾರಿ

[1]. ಮಕರಿ ಪೋಸ್ಟ್,ರಟ್ಟಿಹಳ್ಳಿ ತಾಲೂಕು,ಹಾವೇರಿ ಜಿಲ್ಲೆ.

ಅಥವಾ ಪ್ರಾಚಿಕಾರಿ ಎಂದು ಕರೆಯಲ್ಪಡುತ್ತಿತ್ತು. 16ನೇ ಶತಮಾನದಲ್ಲಿ ಮೊಘಲರಿಗೆ ಸಂಬಂಧಿಸಿದ ವರ್ಣಚಿತ್ರಕಲೆ, ಶಿಲಾ ಕೆತ್ತನೆಗಳಂತಹ ಇತರೆ ಕಲಾ ಶೈಲಿಗಳು ಹುಮಾಯೂನ್‌ನ ಆಳ್ವಿಕೆಯಲ್ಲಿ ಭಾರತಕ್ಕೆ ಪರಿಚಯಗೊಂಡಿದೆ. ಹಾಗಾಗಿ ಇದೇ ಅವಧಿಯಲ್ಲಿ ಇಟಾಲಿಯನ್ ಕೆಲಸಗಾರರು ಪಿಯಾತ್ರದುರ ಕಲೆಯನ್ನು ಭಾರತೀಯ ಉಪಖಂಡಕ್ಕೆ ಪರಿಚಯಿಸಿರಬಹುದು ಎಂದು ಊಹಿಸಲಾಗಿದೆ. ಆದರೆ 17ನೇ ಶತಮಾನದಲ್ಲಿ ವಿಶೇಷವಾಗಿ ಷಾಜಹಾನ್‌ನ ಅವಧಿಯಲ್ಲಿ ಪಿಯಾತ್ರದುರ ಕಲೆಯು ನಿರ್ದಿಷ್ಟ ಕಲೆಯಾಗಿ ವಿಕಸನಗೊಂಡಿತು ಮೊಘಲರಿಗೆ ಸಂಬಂಧಿಸಿದ ಪಿಯಾತ್ರದುರ ಕಲೆಯು ವರ್ಣರಂಜಿತ ಸೂಕ್ಷ್ಮ ಮತ್ತು ಸಂಕೀರ್ಣ ವಿನ್ಯಾಸಗಳಿಂದ ಗುರುತಿಸಲ್ಪಟ್ಟಿದೆ. ಸಾಮಾನ್ಯವಾಗಿ ಇವರ ಕಾಲದಲ್ಲಿ ಬಿಳಿ ಅಮೃತಶಿಲೆಯ ತಳಹದಿಯ ಮೇಲೆ ಅಮೂಲ್ಯ ಮತ್ತು ಅರೆಪ್ರಶಸ್ತಶಿಲೆ, ಮುತ್ತು, ರತ್ನ ಸಮುದ್ರ ಚಿಪ್ಪು, ಹವಳ, ಕಾರ್ನೆಲಿಯನ್, ಜಾಸ್ಪರ್, ಲ್ಯಾಪಿಸ್, ಲಾಝುಲಿ ಶಿಲೆ, ಗೋಮೇಧಕ ಹರಳು ಮತ್ತು ನೀಲಮಣಿಗಳನ್ನು ಸೂಕ್ಷ್ಮವಾದ ಹೂ ಬಳ್ಳಿ, ಜಾಮಿತೀಯ ಮಾದರಿ ಮತ್ತು ಅರೆಬೆಸ್ಕೋ(ಅರಬ್ಬಿ ಲಿಪಿಯ ಕೆತ್ತನೆ) ಮಾದರಿಯಲ್ಲಿ ವಿನ್ಯಾಸಗೊಳಿಸಲಾಗುತ್ತದೆ. ಇಂತಹ ಮಾದರಿಗಳನ್ನು ಮೊಘಲರ ಕಟ್ಟಡಗಳಾದ ಇತ್ಮದ್ – ಉದ್–ದೌಲನ ಗೋರಿ, ಜಹಾಂಗೀರನ ಗೋರಿ ತಾಜ್‌ಮಹಲ್, ಶೀಶ್‌ಮಹಲ್, ದೆಹಲಿ ಕೆಂಪು ಕೋಟೆಯ ರಂಗ್‌ಮಹಲ್, ಖಾಸ್‌ಮಹಲ್, ಆಗ್ರಾ ಕೋಟೆಯ ದಿವಾನ್–ಎ–ಖಾಸ್ ಹಾಗೂ ನೌಲಾಖಾ ಮಂಟಪಗಳ ಸ್ತಂಭ, ಕಮಾನು, ಮೇಲ್ಛಾವಣಿ, ಕಾರಂಜಿ ಕುಳಿಗಳ ಮೇಲೆ ರಚಿಸಲಾಗಿದೆ.

**ಅರ್ಥ ಮತ್ತು ಹಿನ್ನೆಲೆ :–**

ಪಿಯಾತ್ರದುರ ಎಂಬ ಶಬ್ಧವು ಇಟಾಲಿಯನ್ ಮೂಲದ್ದಾಗಿದ್ದು ಪಿಯಾತ್ರ ಎಂಬ ಶಬ್ದವು ಒರಟು ಅಥವಾ ಗಟ್ಟಿಯಾದ ಎಂಬ ಅರ್ಥವನ್ನು, ದುರ ಎಂಬ ಶಬ್ಧವು ಶಿಲೆ ಎಂಬ ಅರ್ಥವನ್ನು ನೀಡುತ್ತದೆ ಮೂಲದಲ್ಲಿ ಈ ಕೆತ್ತನೆಯ ಕೆಲಸ ಗ್ರೀಕ್‌ರಿಂದ ರೋಮನ್‌ರಿಂದ ಹಾಗೂ ಈಜಿಪ್ಟಿನ ಜನತೆಯಿಂದ ಕಟ್ಟಿಗೆ ಶಿಲೆ ಅಥವಾ ಲೋಹದ ಅಲಂಕರಣದಲ್ಲಿ ಬಳಸಲ್ಪಟ್ಟಿತು. ನಂತರ ಯುರೋಪಿನಲ್ಲಾದ ಪುನರುಜ್ಜೀವನದ ಕಾಲದಲ್ಲಿ ಈ ತಂತ್ರವು ಇಟಲಿಯ ಪ್ಲೋರೆನ್ಸ್‌ನಲ್ಲಿ ಒಂದನೆಯ ಮೆಡಿಸಿ ಪ್ರಾನ್ಸಿಸ್‌ನ (1541–1587) ಅವಧಿಯಲ್ಲಿ ನಿರ್ದಿಷ್ಟ ಕಲೆಯಾಗಿ ಅವಿಷ್ಕಾರ ಹೊಂದಿತು. ಮೆಡಿಸಿಯು ತನ್ನ ಜೀವಿತಾವಧಿಯ ಕೊನೆಯಲ್ಲಿ ಪ್ಲೋರೆನ್ಸ್‌ನಲ್ಲಿ ಕಲ್ಲಿನ ಕಾರ್ಯಾಗಾರವನ್ನು ನಿರ್ಮಿಸಿ ಅತ್ಯುತ್ತಮ ಕೆಲಸಗಾರರನ್ನು ಈ ಸ್ಥಳಕ್ಕೆ ಕರೆತಂದನು ಇವರು ತಮ್ಮ ಜ್ಞಾನವನ್ನು ಒಟ್ಟುಗೂಡಿಸುವ ಮೂಲಕ ವಿಶಿಷ್ಟವಾದ ಉಪಕರಣಗಳ ಮತ್ತು ತಂತ್ರಗಳನ್ನು ಅಭಿವೃದ್ಧಿಪಡಿಸಿದರು. ಇದರಿಂದ ಪಿಯಾತ್ರದುರ ಕಲೆ ಅಗತ್ಯವಾದ ಪ್ರಚೋದನೆಯನ್ನು ಪಡೆದು ಪ್ರಪಂಚದಾದ್ಯಂತ ಪ್ರಸರಣಗೊಂಡಿತು.


ಪ್ರಾರಂಭದಲ್ಲಿ ಇಟಲಿಯಲ್ಲಿ ಕತ್ತರಿಸಿ ಜೋಡಿಸುವ ತಂತ್ರಗಳನ್ನು ಮರದ ಪಿಠೋಪಕರಣದ ತಯಾರಿಕೆಯಲ್ಲಿ ಬಳಸಾಗುತ್ತಿತ್ತು. ಈ ತಂತ್ರಗಳು ವಾಸ್ತುಶಿಲ್ಪ ಕ್ಷೇತ್ರದಲ್ಲಿ ಪಿಯಾತ್ರದುರ ಕಲೆಯನ್ನು ಪ್ರೇರೆಪಿಸಿದವು. ಅದೇ ರೀತಿ ಪರ್ಷಿಯನ್ನರು ತಮ್ಮ ಸಾಂಪ್ರದಾಯಿಕ ಅಲಂಕರಣದಲ್ಲಿ ಬಳಸಿದ ಪಿಯಾತ್ರದುರ ಕಲೆಯು ಅಕ್ಬರನ ಕಾಲದ ಮೊಸಾಯಿಕ್ ಕೆಲಸದಿಂದ(ಕಲ್ಲು, ಹೆಂಚು, ಗಾಜು ಇತ್ಯಾದಿಗಳ ಸಣ್ಣ ತುಂಡುಗಳನ್ನು ಒಟ್ಟಿಗೆ ಸೇರಿಸುವ ಮೂಲಕ ನಿರ್ಮಿಸಲಾದ ಚಿತ್ರ ಅಥವಾ ಮಾದರಿ) ಅದರ ಶೈಲಿ ಮತ್ತು ಮಾದರಿಗಳ ಪ್ರಮಾಣದಲ್ಲಿ ಬದಲಾವಣೆ ಹೊಂದಿತು. ಸಂಪೂರ್ಣವಾಗಿ ಅಲ್ಲದಿದ್ದರೂ ಭಾಗಶಃ ಪಿಯಾತ್ರದುರ ಕಲೆಯು ಮೊಘಲರ ಅಡಿಯಲ್ಲಿ ಅಭಿವೃದ್ಧಿಹೊಂದಿ ಷಾಜಹಾನ್‌ನ ಕಾಲದಲ್ಲಿ ಸೊಗಸಾದ ಮತ್ತು ಮುಂದುವರಿದ ಮಟ್ಟಕ್ಕೆ ತಲುಪಿತು ಪಿಯಾತ್ರದುರದ ಇಟಾಲಿಯನ್ ಮಾದರಿಯ ಪುರಾವೆಗಳು ನಮಗೆ ಮೊಘಲ್ ಆಸ್ಥಾನದಲ್ಲಿ ಕಾಣಸಿಗುತ್ತವೆ. ಇವುಗಳನ್ನು ಇಟಲಿಯ ವ್ಯಾಪಾರಸ್ಥರು, ಪ್ರವಾಸಿಗರು ಮೊಘಲ್ ಚಕ್ರವರ್ತಿಗಳನ್ನು ಮತ್ತು ಆಸ್ಥಾನಿಕರನ್ನು ಮೆಚ್ಚಿಸಲು ಮೊಘಲ್ ಆಸ್ಥಾನಕ್ಕೆ ತಂದಿರಬಹುದು. ಪಿಯಾತ್ರದುರ ತಂತ್ರವನ್ನು ಭಾರತದಲ್ಲಿ ಷಜಹಾನ್‌ನಗಾಗಿ ಕೆಲಸ ಮಾಡಿದ ಇಟಲಿಯ ಕುಶಲಕರ್ಮಿಗಳು ಅದರ ಅಂತಿಮ ಪರಿಪೂರ್ಣತೆಗೆ ತಂದರು ಹಾಗೂ ಸ್ಥಳೀಯ ಕುಶಲಕರ್ಮಿಗಳು ಮೊಸಾಯಿಕ್ ಶೈಲಿಗಳ ಅಧ್ಯಯನದ ಜೊತೆಗೆ ಇಟಾಲಿಯನ್ ಮಾದರಿಗಳನ್ನು ಮತ್ತು ತಂತ್ರಗಳನ್ನು ಮೊಘಲರ ಪಿಯಾತ್ರದುರ ಕಲೆಯಲ್ಲಿ ಬಳಸಿದರು ಷಾಜಹಾನ್‌ನ ಅವಧಿಯಲ್ಲಿ ದೆಹಲಿಯ ಸಾರ್ವಜನಿಕರ ಸಭಾಂಗಣದ ಸಿಂಹಾಸನದ ಹಿಂದೆ ಪಿಯಾತ್ರದುರದ ಕೆಲವು ಮಾದರಿಗಳನ್ನು ಕಾಣಬಹುದು. ಷಾಜಹಾನ್‌ನ ಅವಧಿಯಲ್ಲಿ ಸಾಟಿಯಿಲ್ಲ ತಾಜ್‌ಮಹಲ್‌ನ ರಚನೆಯನ್ನು ಸೇರಿದಂತೆ ಅನೇಕ ವಾಸ್ತುಶಿಲ್ಪದ ರಚನೆಗಳಲ್ಲಿ ಭಾರತೀಯ ಉಪಖಂಡದ ಸ್ಥಳೀಯ ಕುಶಲಕರ್ಮಿಗಳ ಪಿಯಾತ್ರದುರ ತಂತ್ರವನ್ನು ಇಟಾಲಿಯನ್ ಕುಶಲಕರ್ಮಿಗಳು ಪ್ರೇರೆಪಿಸಿದರು.

- **ಪಿಯಾತ್ರದುರ ಕಲೆಯ ತಂತ್ರಗಳು :–**

  ಪಿಯಾತ್ರದುರವು ಒಂದು ಶೀಲೆಯ ತುಣುಕುಗಳನ್ನು ಮತ್ತೊಂದು ಶಿಲೆಯಲ್ಲಿ ಒಳಸೇರಿಸುವ ತಂತ್ರವಾಗಿದೆ. ಮೊದಲನೆಯದಾಗಿ ಚಿತ್ರವನ್ನು ತಯಾರಿಸಲಾಗುತ್ತದೆ. ನಂತರ ಕಲಾವಿದನು ಈ ಕಲೆಗೆ ಬೆಂಬಲವಾಗಿ ಕಾರ್ಯನಿರ್ವಹಿಸಲು ತುಲನಾತ್ಮಕವಾಗಿ ದಪ್ಪಗಿರುವ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಸಂಪೂರ್ಣವಾಗಿ ಸಮತಟ್ಟಾಗಿರುವ ಅಮೃತಶಿಲೆಯ ಚಪ್ಪಡಿಗಳನ್ನು ಆಯ್ಕೆ ಮಾಡಿಕೊಳ್ಳುತ್ತಾನೆ. ನಂತರ ವರ್ಣರಂಜಿತ ಅರೆ ಪ್ರಶಸ್ತ ಶಿಲೆಗಳ ಅಥವಾ ವರ್ಣರಂಜಿತ ಅಮೂಲ್ಯ ಶಿಲೆಗಳನ್ನು ಸಮಂಜಸವಾದ ಗಾತ್ರಕ್ಕನುಗುಣವಾಗಿ ಕತ್ತರಿಸಬೇಕು ಕಲಾವಿದನು. ಈ ಶಿಲೆಗಳನ್ನು ಹೇಗೆ ಕತ್ತರಿಸಬೇಕೆಂಬುದರ ಬಗ್ಗೆ ಕಾಳಜಿವಹಿಸಬೇಕು ಇವುಗಳು ಸಾಕಷ್ಟು ಗಾತ್ರದ ಜೊತೆಗೆ ಉತ್ತಮ

ಆಳವನ್ನು ಹೊಂದಿರುವುದು ಅವಶ್ಯಕ ಸರಿಯಾದ ಆಯಾಮಗಳಲ್ಲಿ ಕತ್ತರಿಸಲಾದ ಈ ಶಿಲೆಗಳ ಗಾತ್ರಕ್ಕನುಗುಣವಾಗಿ ಅಮೃತ ಶಿಲೆಯನ್ನು ಕೊರೆಯಲಾಗುತ್ತದೆ. ಕೊರೆದ ಈ ಕುಳಿಗಳನ್ನು ಕತ್ತರಿಸಿ ನಯಗೊಳಿಸಿದ ವರ್ಣರಂಜಿತ ಅರೆಪ್ರಶಸ್ತಿ ಶಿಲಾ ತುಣುಕುಗಳಿಂದ ಅಂಟಿನ ಲೇಪನದೊಂದಿಗೆ ತುಂಬಲಾಗುತ್ತದೆ. ನಂತರ ಮೇಲ್ಮೈಯನ್ನು ಪಾಲಿಶ್ ಮಾಡಿ ನಯಗೊಳಿಸಲಾಗುತ್ತದೆ.

**ಮೊಘಲರ ವಾಸ್ತುಶಿಲ್ಪದಲ್ಲಿ ಪಿಯಾತ್ರದುರ ರಚನೆಗಳು :–**



ಚಿತ್ರ–1 ಇತ್ಮದ್–ಉದ್–ದೌಲನ ಸಮಾಧಿಯ ಮೇಲಿನ ಪಿಯಾತ್ರದುರ ಕಲೆ



ಚಿತ್ರ–2 ಜಹಾಂಗೀರನ ಸಮಾದಿಯ ಮೇಲಿನ ಪಿಯಾತ್ರದುರ ಕಲೆ

ಜಹಾಂಗೀರ್‌ನ ರಾಣಿಯಾದ ನೂರಜಹಾನ್‌ಳು ಕ್ರಿ.ಶ.1628 ರಲ್ಲಿ ತನ್ನ ತಂದೆ ಇತ್ಮದ್–ಉದ್–ದೌಲನ ಸಮಾಧಿ ರಚನೆಯಲ್ಲಿ ಪಿಯಾತ್ರದುರ ಕಲೆಯನ್ನು ಮೊದಲ ಬಾರಿ ಬಳಸಿದಳು. ಈ ಗೋರಿಯು ಆಭರಣಗಳ ಪೆಟ್ಟಿಗೆಯ ಆಕಾರದಲ್ಲಿದ್ದು ಪಿಯಾತ್ರದುರದ ಗಮನಾರ್ಹ ಅಲಂಕರಣದಿಂದ ಕೂಡಿದೆ. ಈ ಸಮಮಾಧಿಯು ಮೊಘಲರ ಸಮಾಧಿ ವಾಸ್ತುಶಿಲ್ಪ ಮತ್ತು ಅಲಂಕರಣಕ್ಕೆ ಪ್ರಧಾನ ಸ್ಫೂರ್ತಿಯಾಯಿತು. ನಂತರ ಸಾಮ್ರಾಜ್ಞೆ ನೂರ್‌ಜಹಾನ್‌ಳು ಲಾಹೋರ್‌ನ ಷಾಹದಾರ್ ಬಾಘ್‌ನಲ್ಲಿ ತನ್ನ ಪತಿ ಜಹಾಂಗೀರ್‌ನ ಸಮಾಧಿಕಟ್ಟಡದ ನಿರ್ಮಾಣವನ್ನು ಪ್ರಾರಂಭಿಸಿದಳು. ಈ ಕಟ್ಟಡ ಷಾಜಹಾನ್‌ನ ಆಳ್ವಿಕೆಯಲ್ಲಿ ಕ್ರಿ.ಶ.1637ರಲ್ಲಿ ಪೂರ್ಣಗೊಂಡಿತು. ಈ ಕಟ್ಟಡವು ಕೆಂಪು ಮರಳುಗಲ್ಲಿನಿಂದ ನಿರ್ಮಿಸಲ್ಪಟ್ಟಿದ್ದು, ಅದರ ಮೇಲೆ ಸುಂದರವಾದ ಬಿಳಿ ಅಮೃತ ಶಿಲೆಯ ಕೆತ್ತನೆಯನ್ನು ಈ ಸಮಾಧಿ ಮತ್ತು ಸುತ್ತಲಿನ ಭಾಗವನ್ನು ಇಲ್ಲಿ ಪಿಯಾತ್ರದುರ ಕೆತ್ತನೆಯ ಕೆಲಸದಿಂದ ಅಲಂಕರಿಸಲ್ಪಟ್ಟಿದೆ. ಇಲ್ಲಿ ಪಿಯಾತ್ರದುರ ಕಲೆಯ ಗುಣಮಟ್ಟ ಮತ್ತು ಸೂಕ್ಷ್ಮತೆಗಳು ಇತ್ಮದ್–ಉದ್–ದೌಲನ ಸಮಾಧಿ ಕಟ್ಟಡದ ಮೇಲಿನ ಪಿಯಾತ್ರದುರ ರಚನೆಗಿಂತ ಒಂದು ಹೆಜ್ಜೆ ಮುಂದಿದೆ ಷಾಜಹನ್‌ನ ಕಾಲದಲ್ಲಿ ಈ ಸಮಾಧಿಗೆ ವೇದಿಕೆಯನ್ನು ನಿರ್ಮಿಸಲಾಯಿತು. ಸಮಾಧಿಯ ಮೇಲೆ ಪಿಯಾತ್ರದುರ ತಂತ್ರದಿಂದ ಸುಂದರವಾದ ಅರಬ್ಬಿ ಖುರಾನಿನ ಶ್ಲೋಕಗಳ ಕ್ಯಾಲಿಗ್ರಫಿಯನ್ನು ರಚಿಸಲಾಗಿದೆ. ಈ ಸಮಾಧಿಯನ್ನು ಪಿಯಾತ್ರದುರದ ನೆಸರ್ಗಿಕ ಹೂವಿನ ಮಾದರಿಗಳಿಂದ ಅಲಂಕರಿಸಲಾಗಿದೆ. ಈ ಅಲಂಕರಣವನ್ನು ಅಮೆಥಿಸ್ಟ್, ಕಾರ್ನೆಲಿಯನ್ ಲ್ಯಾಪಿಸ್,

ಲಾಝುಲಿ ಮತ್ತು ವೈಢೂರ್ಯದಂತ ಅರೆಪ್ರಶಸ್ತ ಶಿಲೆಗಳಿಂದ ಮಾಡಲಾಗಿದ್ದು ಪಿಯಾತ್ರದುರ ಕಲಾ ಪ್ರಕಾರದ ಅತ್ಯುತ್ತಮ ಉದಾಹರಣೆ ಎಂದು ಪರಿಗಣಿಸಲ್ಪಟ್ಟಿದೆ.



**ಚಿತ್ರ–3 ಲಾಹೋರನ ಶೀಶ್‌ಮಹಲ್‌ನಲ್ಲಿರುವ ಪಿಯಾತ್ರದುರ ಕಲೆ**

ಕ್ರಿ.ಶ.1631ರಲ್ಲಿ ಷಾಜಹಾನ್‌ನಿಂದ ನಿರ್ಮಿಸಲಾದ ಲಾಹೋರ್‌ನ ಶೀಶ್‌ಮೆಹಲ್ ಮತ್ತು ನೌಲಾಖಾ ಮಂಟಪದಲ್ಲಿನ ಪಿಯಾತ್ರದುರ ಕಲೆಯನ್ನು ಅತ್ಯಂತ ಸೂಕ್ಷ್ಮ ಮತ್ತು ಸಂಸ್ಕರಿಸಿದ ಮಾದರಿಯೆಂದು ಪರಿಗಣಿಸಲಾಗಿದೆ. ಈ ಕಟ್ಟಡದ ನಿಖರವಾದ ಕುಳಿಗಳಲ್ಲಿ ಪಿಯಾತ್ರದುರ ಕಲೆಯಿಂದ ಕೈಯಿಂದ ಸಣ್ಣ ಪ್ರಮಾಣದಲ್ಲಿ ಕತ್ತರಿಸಿ ಅಳವಡಿಸಿದ ಅರೆ ಪ್ರಶಸ್ತ ಕಲ್ಲುಗಳ ನಿಖರತೆಯು ಆಧುನಿಕ ಲೆಸರ್ ಕಟ್ ತಂತ್ರಜ್ಞಾನವನ್ನು ಸೂಚಿಸುತ್ತದೆ. ಡಾ.ಎ.ರೆಹಮಾನ್ ರವರು ತಮ್ಮ 'ಇಸ್ಲಾಮಿಕ್ ಆರ್ಕಿಟೆಕ್ಚರ್ ಆಫ್ ಪಾಕಿಸ್ತಾನ' ಎಂಬ ಕೃತಿಯಲ್ಲಿ ನೌಲಖಾ ಮಂಟಪದ 2.1/4 * 1.3/4 ಇಂಚಿನಷ್ಟು ಭಾಗದಲ್ಲಿ ಪಿಯಾತ್ರದುರ ಕೃತಿಯ ಬರೀ ಒಂದು ಹೂವಿನ ಮಾದರಿಯನ್ನು ರಚಿಸಲು ಸುಮಾರು 102 ಅರೆ ಪ್ರಶಸ್ತ ಶಿಲೆಗಳ ಚೂರುಗಳನ್ನು ಬಳಸಲಾಗಿದೆ ಎಂದು ಉಲ್ಲೇಖಿಸಿದ್ದಾರೆ. ಶೀಶ್ ಮತ್ತು ನೌಲಾಖಾ ಮಂಟಪದ ಮೇಲಿನ ಕಂಬಗಳು ಪೀಠದ ಕಂಬಗಳು ಹಾಗೂ ಕಂಬದ ಮೇಲ್ಛಾವಣಿಗಳು ಪಿಯಾತ್ರದುರದ ಅತ್ಯುತ್ತಮ ಕಲೆಯನ್ನು ಒಳಗೊಂಡಿದೆ.



**ಚಿತ್ರ–4 ತಾಜ್‌ಮಹಹಲ್‌ನಲ್ಲಿರುವ ಪಿಯಾತ್ರದುರ ಕಲೆ**

ಷಾಜಹಾನ್‌ನು ತನ್ನ ಪ್ರೀತಿಯ ಪತ್ನಿ ಮುಮ್ತಾಜ್‌ಮಹಲ್‌ಳ ಪ್ರೀತಿಯ ಸಂಕೇತವಾಗಿ 1632 – 1648ರಲ್ಲಿ ನಿರ್ಮಿಸಲಾದ ತಾಜಮಹಲ್ ಸಮಾಧಿ ಕಟ್ಟಡವು ಮೊಘಲ್ ವಾಸ್ತುಶಿಲ್ಪ ಯುಗದ ಮೇರುಕೃತಿಯೆಂದು ಪರಿಗಣಿಸಲಾಗಿದೆ. ಇದು ಭಾರತೀಯ ಉಪಖಂಡದಲ್ಲಿ ಅಷ್ಟೇ ಅಲ್ಲದೇ ಜಗತ್ತಿನಲ್ಲಿಯೇ ಮಹಿಳೆಗಾಗಿ ನಿರ್ಮಿಸಲಾದ ಅತ್ಯಂತ ರಂಜಿತ ಸಮಾಧಿಯಾಗಿದೆ. ಇದು ಜಗತ್ತಿನ ಅದ್ಭುತಗಳಲ್ಲಿ ಒಂದಾಗಿದ್ದು,ಮಾನವನ ವಾಸ್ತುಶಿಲ್ಪದ ಇತಿಹಾಸದ ಈ ಅದ್ಭುತವನ್ನು ಪೂರ್ಣಗೊಳಿಸಲು 17ವರ್ಷಗಳು ಬೇಕಾದವು. ಲಂಕಾಸ್ಟರ್‌ನಂತಹ ತಾಜಮಹಲ್‌ನ ಕೆಲವು ವಿಮರ್ಶಕರು ತಾಜಮಹಲ್‌ನ ಮೇಲೆ ತೆಳುವಾಗಿ ಚದುರಿದ ಎಲೆಗೊಂಚಲುಗಳ ಪಿಯಾತ್ರದುರದ ಮಾದರಿಯು ಕ್ರಿ.ಶ.15ನೇ ಶತಮಾನದ ಇರಾನಿನ ಚಿಕಣಿ ಚಿತ್ರಗಳಲ್ಲಿ ಚಿತ್ರಿಸಲಾದ ಉದ್ಯಾನವನದಲ್ಲಿ ಕಂಡುಬರುವ ವಿರಳವಾದ ಸರಳತೆಯನ್ನು ನೆನಪಿಸುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.ತಾಜ್‌ಮಹಲ್‌ನ ನಿರ್ಮಾಣಕ್ಕಾಗಿ ವಿಶೇಷವಾದ ಮತ್ತು ಸೂಕ್ಷ್ಮವಾದ ಅಮೃತಶಿಲೆಯನ್ನು ರಾಜಸ್ಥಾನದ ಮಕ್ರಾನ್‌ದಿಂದ ಪ್ರತ್ಯೇಕವಾಗಿ ಆಮದು ಮಾಡಿಕೊಳ್ಳಲಾಗಿತ್ತು. ತಾಜಮಹಲ್‌ನ ಕಮಾನುಗಳು, ಪ್ರವೇಶದ್ವಾರಗಳು ಮತ್ತು ಸಮಾಧಿಯ ಮೇಲೆ ವರ್ಣರಂಜಿತ ಕಾರ್ನೆಲಿಯನ್‌ಶಿಲೆ, ವೈಢೂರ್ಯದಂತಹ ಲ್ಯಾಪಿಸ್,ಲಾಝುಲಿಶಿಲೆ ಮತ್ತು ಮಲಾಕೈಟ್‌ನಂತಹ ಖನಿಜ ಶಿಲೆಗಳನ್ನು ಸೂಕ್ತವಾಗಿ ಕತ್ತರಿಸಿ ಈ ಬಿಳಿ ಅಮೃತಶಿಲೆಗಳಲ್ಲಿ ಅಳವಡಿಸಲಾಗಿದೆ. ತಾಜ್‌ಮಹಲ್‌ನ ಹೂವಿನ ಪಿಯಾತ್ರದುರದ ಪ್ರದರ್ಶನವು ತುಂಬ ವಿಶಿಷ್ಟವಾಗಿದ್ದು, ಸಾಮಾನ್ಯವಾಗಿ ಸಾಂಪ್ರದಾಯಿಕ ಫ್ಲೋರೆಂಟೈನ್‌ನ ಪಿಯಾತ್ರದುರ ಕಲೆಯಂತೆ ಜೋಡಿಸಲಾಗಿದೆ.ಅನೇಕ ಇತಿಹಾಸಕಾರರು ತಾಜಮಹಲ್‌ನಲ್ಲಿ ಈ ಕೆಲಸವನ್ನು ಫ್ಲೋರೆಂಟೆನ್ ಕುಶಲಕರ್ಮಿಗಳು ಅಥವಾ ಇಟಾಲಿಯನ್ ಕಲೆಯನ್ನು ಅಭ್ಯಸಿಸಿದ ಸ್ಥಳೀಯ ಕುಶಲಕರ್ಮಿಗಳು ಮಾಡಿರಬಹುದೆಂದು ಅಬಿಪ್ರಾಯ ಪಟ್ಟಿದ್ದಾರೆ. ಆದರೆ ಕೆಲವು ತರ್ಕಬದ್ಧ ವಿಧಾನಗಳು ಇಸ್ಲಾಮಿಕ್ ವಾಸ್ತುಶಿಲ್ಪದ ಪೂರ್ವ ಮೊಘಲ್ ಮತ್ತು ಮೊಘಲ ಮಾದರಿಗಳಲ್ಲಿ ಜಾಮಿತೀಯ ಮತ್ತು ಹೂವಿನ ವಿನ್ಯಾಸದ ವಿಶಿಷ್ಟ ಲಕ್ಷಣಗಳಿಗೆ ಆದ್ಯತೆ ನೀಡಲಾಗಿತ್ತು ಅಂತಹ ಸ್ವರ್ಗದ ಪರಿಕಲ್ಪನೆಯ ಮಾಂತ್ರಿಕ ಮತ್ತು ಅಲೌಖಿಕ ಗುಣಮಟ್ಟವನ್ನು ತಾಜ್‌ಮಹಲ್‌ನಲ್ಲಿ ಪಿಯಾತ್ರದುರ ಲಕ್ಷಣಗಳಲ್ಲಿ ಕಾಣಬಹುದು.



**ಚಿತ್ರ–5 ದೆಹಲಿ ಕೋಟೆಯ ದಿವಾನೆಖಾಸ್‌ನಲ್ಲಿ ಮೇಲೆ ಪಿಯಾತ್ರದುರ ಕಲೆ**



**ಚಿತ್ರ–6 ಆಗ್ರಾ ಕೋಟೆಯ ದಿವಾನೆಖಾಸ್‌ನ ಪಿಯಾತ್ರದುರ ಕಲೆ**

ಕ್ರಿ.ಶ.1545ರಲ್ಲಿ ಇಸ್ಲಾಂ ಷಾ ಸೂರಿಯಿಂದ ಸ್ಥಾಪಿಸಲ್ಪಟ್ಟ ದೆಹಲಿಯ ಆರಂಭಿಕ ಕೆಂಪು ಕೋಟೆಯನ್ನು ನಂತರದ ಕ್ರಿ.ಶ.1628–1648ರ ಅವಧಿಯಲ್ಲಿ ಷಾಹಜಹಾನನು ಮಾರ್ಪಡಿಸಿದನು ಈ ಅವಧಿಯಲ್ಲಿ ದೆಹಲಿಯ ಕೆಂಪು ಕೋಟೆಯ ಖಾಸ್‌ಮಹಲ್ (1640) ಮತ್ತು ರಂಗ್‌ಮಹಲ್‌ನ್ನು (1648) ಪುನರ್‌ನಿರ್ಮಿಸಿ ನವೀಕರಿಸಲಾಯಿತು. ಇವುಗಳು ಮಂಟಪಗಳ ಬಿಳಿ ಅಮೃತಶಿಲೆಯ ಮೇಲಿನ ಅರೆಪ್ರಶಸ್ತ ಶಿಲೆಗಳಿಂದ ಕಾರ್ಯಗತಗೊಂಡ ಪಿಯಾತ್ರದುರ ಕಲೆಯು ಇವುಗಳ ಪ್ರಮುಖ ಲಕ್ಷಣವಾಗಿದೆ.

ರಂಗ್‌ಮಹಲ್ ರಾಜಮನೆತನದ ಜನಾನವಾಗಿಯೂ ಬಳಕೆಯಾಗುತ್ತಿತ್ತು ಇದರ ಸ್ಥಾನಮಾನಮ್ನು ಗಮನದಲ್ಲಿಟ್ಟುಕೊಂಡು ಪಿಯಾತ್ರದುರ ಕಲಾ ಶೈಲಿಯಲ್ಲಿ ವರ್ಣರಂಜಿತ ಅಲಂಕರಣವನ್ನು ಹೊಂದಿದೆ. ಈ ಮಹಲಿನ ಮೇಲ್ಛಾವಣಿಯು ಗಾಢ ಬಣ್ಣದ ಅಮೂಲ್ಯ ಶಿಲೆಗಳು ಮತ್ತು ಚಿನ್ನದ ಕೆತ್ತನೆಯ ಕೆಲಸದಿಂದ ಕೂಡಿತ್ತು. ಇದು ಕ್ರಿ.ಶ.1857ರ ಅಶಾಂತಿ ಮತ್ತು ಯುದ್ಧದ ಸಮಯದಲ್ಲಿ ಮರಾಠರು ಮತ್ತು ಜಾಟ್‌ರಿಂದ ಲೂಟಿಗೊಳಪಟ್ಟಿತು. ಪ್ರೇಕ್ಷಕರ ಸಭಾಂಗಣದಿಂದ ದಿವಾನೆಖಾಸ್‌ನ ಕಂಬಗಳು, ಮೇಲ್ಛಾವಣಿಗಳ, ಕಮಾನುಗಳ ಮತ್ತು ಗೋಡೆಗಳ ಅಮೃತ ಶಿಲೆಯ ಮೇಲೆ ಅರೆ ಪ್ರಶಸ್ತ ಶಿಲೆಗಳನ್ನು ಪಿಯಾತ್ರದುರ ಕೆತ್ತನೆಯಿಂದ ಅಳವಡಿಸಿ ಅಲಂಕರಿಸಲಾಗಿದೆ ದೆಹಲಿಯ ಕೆಂಪು ಕೋಟೆಯ ದಿವಾನೆಖಾಸ್ ಕಟ್ಟಡವು ಆಗ್ರಾ ಕೋಟೆಯ ದಿವಾನೆಖಾಸ್‌ನ ಅವಿಭಾಜ್ಯ ಅಂಗವಾಗಿದೆ.

ಕ್ರಿ.ಶ.1635ರಲ್ಲಿ ಷಾಜಹಾನ್‌ನಿಂದ ಆಗ್ರಾ ಕೋಟೆಯಲ್ಲಿ ನಿರ್ಮಿಸಲಾದ ದಿವಾನೆಖಾಸ್‌ನ ಮಂಟಪದ ಸ್ತಂಭಗಳ ಮೇಲೆ ಕಮಾನುಗಳ ಮೇಲೆ ಮತ್ತು ರಾಜಮನೆತನದ ಸಭಾಂಗಣದೊಳಗೆ ನೆಲೆಗೊಂಡಿರುವ ಕಾರಂಜಿಯ ಅಂಚಿನ ಸುತ್ತಲೂ ಸೊಗಸಾದ ಪಿಯಾತ್ರದುರಧ ಅಲಂಕರಣವನ್ನು ಮಾಡಲಾಗಿದೆ ಆಗ್ರಾ ಕೋಟೆಯ ದಿವಾನೆಖಾಸ್‌ನ ಕುರಿತು ಕೆ.ಸಿ.ಅರೋರರವರು ದಿವಾನೆಖಾಸ್‌ನ ಸುಂದರವಾದ ಅಮೃತಶಿಲೆಯಲ್ಲಿ ಅಮೂಲ್ಯವಾದ ಶಿಲೆಗಳನ್ನು ಕತ್ತರಿಸಿ ಅಳವಡಿಸುವ ಕೆಲಸವು

ಪರ್ಷಿಯನ್ ಶೈಲಿಯ ಕಲಾತ್ಮಕ ಅಲಂಕಾರವನ್ನು ಪ್ರದರ್ಶಿಸುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ದಿವಾನೆಖಾಸ್‌ನ ಬಿಳಿ ಬಣ್ಣದ ಅಮೃತಶಿಲೆಯ ಪ್ರಶಾಂತತೆಯನ್ನು ತುಂಬಲು ಕಂದು, ಹಸಿರು, ಮತ್ತು ತಿಳಿ ಹಸಿರು ಬಣ್ಣದ ಶಿಲೆಗಳಿಂದ ಸಂಕೀರ್ಣವಾದ ಮತ್ತು ಹಿತವಾದ ಹೂವಿನ ವಿನ್ಯಾಸದ ಮಾದರಿಗಳನ್ನು ರಚಿಸಲಾಗಿದೆ.

**ಉಪಸಂಹಾರ :–**

ಭಾರತೀಯ ಉಪಖಂಡದಲ್ಲಿ ಇಟಾಲಿಯನ್ ಮೂಲದ ಪಿಯಾತ್ರದುರ ಕಲೆಯು ಸ್ಥಳೀಯ ಮಾದರಿಗಳಿಂದ ಅಭಿವೃದ್ಧಿಹೊಂದಿದೆ ನೂರ್‌ಜಹಾನ್, ಷಾಜಹಾನ್ ಹಾಗೂ ಕಲಾವಿದರ ಅಭಿರುಚಿ ಮತ್ತು ಸೌಂದರ್ಯದ ದೃಷ್ಟಿಗೆ ಅನುಗುಣವಾಗಿ ಇತ್ಮದ್–ಉದ್–ದೌಲನ ಸಮಾಧಿಯಿಂದ ನೌಲಾಖಾ ಮಂಟಪ ಮತ್ತು ಶೀಶ್‌ಮಹಲ್‌ನವರಗೆ ಪಿಯಾತ್ರದುರ ಕಲಾ ಪ್ರಕಾರವು ಸೂಕ್ಷ್ಮ ನಿರೂಪಣೆಯಂತೆ ಕ್ರಮೇಣ ವಿಕಸನಗೊಂಡಿತು ವರ್ಣರಂಜಿತ ಬೆಲೆ ಬಾಳುವ ಮತ್ತು ಅರೆ ಬೆಲೆಬಾಳುವ ರತ್ನಗಳು ಶಿಲೆಗಳು ಪಿಯಾತ್ರದುರ ಕಲೆಯಡಿಯಲ್ಲಿ ಹೂವಿನ, ಜಾಮೀತಿಯ, ಅರೆಬೆಸ್ಕೊ ಮತ್ತು ಸಂಯೋಜಿತ ಒಳಹರಿವಿನ ಮಾದರಿಗಳನ್ನು ರಚನೆ ಮಾಡಲು ನೆರವಾದವು. ಮೊಘಲರ ವಾಸ್ತುಶಿಲ್ಪದಲ್ಲಿ ಪಿಯಾತ್ರದುರ ಕಲೆಯು ಹೆಚ್ಚು ಕಲಾತ್ಮಕವಾಗಿ ಸಂಕೀರ್ಣ ಮತ್ತು ವೈವಿಧ್ಯಮಯ ವಿನ್ಯಾಸಗಳನ್ನು ಹಾಗೂ ಬಣ್ಣದ ಸಂಯೋಜನೆಗಳನ್ನು ಪ್ರದರ್ಶಿಸಿತು ವರ್ಣಚಿತ್ರಗಳಂತೆ ಗೋಚರಿಸುವ ಪಿಯಾತ್ರದುರ ಕಲೆಯು ಕೊರೆದ ಅಮೃತಶಿಲೆಯೊಳಗೆ ಅಮೂಲ್ಯ ಮತ್ತು ಅರೆ ಪ್ರಶಸ್ತಿ ಶಿಲೆಗಳನ್ನು ಅಳವಡಿಸುವ ಸಂಕೀರ್ಣ ತಂತ್ರಗಳಿಂದ ಕೂಡಿದ್ದು ಷಾಜಹಾನ್‌ನ ವಿಶಿಷ್ಟ ಅಭಿರುಚಿಯಡಿಯಲ್ಲಿ ಸಾಟಿಯಿಲ್ಲದ ಪ್ರಕಾರವಾಗಿ ಅಭಿವೃದ್ಧಿ ಹೊಂದಿತು.

**ಪರಾಮರ್ಶನ ಗ್ರಂಥಗಳು :–**


1. Arora, K.C. The City Of The Taj: Unique Literature Publishing House, 1937

2. Sharma, Pooja, Et Al. "New Aspects Related To Origin And Development Of Mughal Inlay Art In India Anistoriton Journal, Vol. 11 (2008 -2009);02

3. Lancaster, Clay. A Critique On The Taj Mahal. Journal Of The Society Of Architectural Historians 15, N0.4 (1956) :7 -11

4. Rahman, Abdur, Islamic Architectnre Of Pakstan. (1981)